**ಹೆಚ್ಚುವರಿ ಸಿವಿಲ್ ಜಡ್ಜ ಮತ್ತು ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಭಟ್ಕಳ.**

**ಸಿ. ಸಿ. ನಂಬರಃ 1572/2025**

**ಫಿರ್ಯಾದುದಾರರು** ನವೋದಯ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ,
ಕೋಡಿಯಾಲ್ ಬೈಲ್ ಮಂಗಳೂರು, ಶಾಖೆಃ ಭಟ್ಕಳ
ಅನುಗ್ರಹ ಬಿಲ್ಡಿಂಗ್, ಭಟ್ಕಳ ತಾಲೂಕು,
ಪ್ರತಿನಿಧಿಸುವವರು, ಶಾಖಾ ವ್ಯವಸ್ಥಾಪಕರು,
ಶ್ರೀ ತಾರನಾಥ ತಂದೆ ರಾಜೇಂದ್ರ,

**– ವಿರುದ್ಧ –**

**ಆರೋಪಿತರು** ಶ್ರೀಮತಿ ರತ್ನಾ ಕೋಂಃ ಮಂಜುನಾಥ ಮೊಗೇರ,
ವಯಸ್ಸುಃ 38 ವರ್ಷ
ಸಾಃ ಗೊರಟೆ ಕ್ರಾಸ್, ಬೆಳಕೆ,
ಭಟ್ಕಳ ತಾಲೂಕು, ಉತ್ತರ ಕನ್ನಡ ಜಿಲ್ಲೆ.

**ಆಪಾದನೆ**

ಆರೋಪಿಯಾದ ನೀವು ಪಿರ್ಯಾದಿ ಸಂಸ್ಥೆಯಿಂದ ದಿನಾಂಕಃ 31-03-2023 ರಂದು ಮನೆ ರಿಪೇರಿ ಉದ್ದೇಶಕ್ಕಾಗಿ ರೂ36,000/- (ರೂಪಾಯಿ ಮೂವತ್ತಾರು ಸಾವಿರ ಮಾತ್ರ) ಹಣವನ್ನು ಸಾಲವಾಗಿ ಪಡೆದುಕೊಂಡಿದ್ದು ಇರುತ್ತದೆ. ಸದ್ರಿ ಸಾಲಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಬರೆದುಕೊಟ್ಟಿದ್ದು, ಇರುತ್ತದೆ. ನಂತರ ನೀವು ಸದ್ರಿ ಸಾಲದ ಹಣವನ್ನು ಮರು ಪಾವತಿಸುವ ಸಲುವಾಗಿ ನೀವು ಕೆನರಾ, ಶಿರೂರು ಶಾಖೆಯ ಚೆಕ್ ನಂಬರ್ 201870 ನ್ನು ರೂ. 40,554/-(ರೂಪಾಯಿ ನಲವತ್ತು ಸಾವಿರ ಐದುನೂರ ಐವತ್ತಾಲ್ಕು ಮಾತ್ರ) ಕ್ಕೆ ದಿನಾಂಕಃ 06-02-2025 ಎಂದು ನಮೂದಿಸಿ ಫಿರ್ಯಾದಿದಾರರಿಗೆ ನೀಡಿರುತ್ತೀರಿ, ಸದ್ರಿ ಚೆಕ್ಕನ್ನು ಫಿರ್ಯಾದಿ ಸೊಸೈಟಿಯವರು ಅವರ ವ್ಯವಹಾರದ ಬ್ಯಾಂಕರ್ ರಾದ ದಿ. ಭಟ್ಕಳ ಅರ್ಬನ್ ಕೋ-ಆಪ್ ಬ್ಯಾಂಕ್, ಭಟ್ಕಳ ಮುಖ್ಯ ಶಾಖೆಯಲ್ಲಿ ನಗಧೀಕರಣಕ್ಕಾಗಿ ಹಾಜರಪಡಿಸಿದಾಗ,“Funds Insufficient" ಎಂಬ ಹಿಂಬರಹದೊಂದಿಗೆ ದಿನಾಂಕಃ 10-02-2025 ರಂದು ವಾಪಸ್ಸು ಬಂದಿರುತ್ತದೆ.

ನಂತರ ಫಿರ್ಯಾದಿದಾರರು ದಿನಾಂಕಃ 13-02-2025 ರಂದು ತಮ್ಮ ವಕೀಲರ ಮೂಲಕ ಲೀಗಲ್ ನೋಟಿಸನ್ನು ನಿಮಗೆ ಕಳುಹಿಸಿದ್ದು, ನೋಟಿಸು ಮುಟ್ಟಿದ 15 ದಿವಸದೊಳಗಡೆ ಚೆಕ್ಕನಲ್ಲಿ ನಮೂದಿಸಿದ ಹಣವನ್ನು ನೀಡುವಂತೆ ಸೂಚಿಸಿದ್ದು ಇರುತ್ತದೆ, ಸದ್ರಿ ನೋಟಿಸ್ಸನ್ನು ನೀವು ದಿನಾಂಕಃ 17-02-2025 ರಂದು ಸ್ವೀಕರಿಸಿರುತ್ತೀರಿ.

ಆದರೆ ಇಂದಿನವರೆಗೂ ಸಹ ನೀವು ಚೆಕ್ಕಿನ ಹಣವನ್ನು ಪಾವತಿ ಮಾಡದೆ ಆ ಮೂಲಕ ನೆಗೋಶಿಯೇಬಲ್ ಇನ್‌ಸ್ಟ್ರುಮೆಂಟ ಆಕ್ಟ ಕಲಂ 138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವೆಸಗಿದ್ದೀರಿ ಎಂದು ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಪ್ರಶ್ನೆ – ನಿಮ್ಮ ಮೇಲೆ ಹೊರಿಸಲಾದ ಆಪಾದನೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರ – ಹೌದು

ಪ್ರಶ್ನೆ – ನೀವು ಸದ್ರಿ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೇ?

ಉತ್ತರ – ಇಲ್ಲ. ವಿಚಾರಣೆಯಾಗಬೇಕು.

(ಮೇಲಿನ ಆಪಾದನೆಯನ್ನು ಆಪಾದಿತನಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಯಥಾರೀತಿ ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸಲಾಗಿದೆ.)

ಸಹಿ ಇದೆ/–

**(ಶ್ರೀಮತಿ.ಧನವತಿ)**

ಹೆಚ್ಚುವರಿ ಸಿವಿಲ್ ಜಡ್ಜ ಮತ್ತು

ದಿನಾಂಕಃ 10–12–2025.

ನ್ಯಾಯಿಕ ದಂಡಾಧಿಕಾರಿ, ಭಟ್ಕಳ.